International Journal of Kannada Research
www.kannadajournal.com

ISSN: 2454–5813
IJKR 2019; 5(4): 81-86
© 2019 IJKR
www.kannadajournal.com
Received: 13-08-2019
Accepted: 15-09-2019

ಡಾ.ಸಂಜೀವ ಆರ್.ನಾಯಕ
ಎಂ.ಎ. ಎಂ.ಪಿಲ್. ಪಿ.ಹೆಚ್.ಡಿ.
ಡಿ.ಬಿ.ಎಸ್ ಸಹಾಯಕ
ಪ್ರಾಧ್ಯಾಪಕರು ಕೆ.ಎಲ್.ಇ.ಸಂಸ್ಥೆ,
ಗುದ್ಲೆಪ್ಪ ಹಳ್ಳಿಕೇರಿ
ಮಹಾವಿದ್ಯಾಲಯ ಹಾವೇರಿ

Corresponding Author:
ಡಾ.ಸಂಜೀವ ಆರ್.ನಾಯಕ
ಎಂ.ಎ. ಎಂ.ಪಿಲ್. ಪಿ.ಹೆಚ್.ಡಿ .
ಡಿ.ಬಿ.ಎಸ್ ಸಹಾಯಕ
ಪ್ರಾಧ್ಯಾಪಕರು ಕೆ.ಎಲ್.ಇ.ಸಂಸ್ಥೆ,
ಗುದ್ಲೆಪ್ಪ ಹಳ್ಳಿಕೇರಿ
ಮಹಾವಿದ್ಯಾಲಯ ಹಾವೇರಿ

ಸಾಹಿತ್ಯ ಮತು ಜಾತ್ರೆ

ಡಾ.ಸಂಜೀವ ಆರ್.ನಾಯಕ

ಜಾತ್ರೆ ಗ್ರಾಮೀಣ ಜೀವನದ ಅವಿಭಾಜ್ಯ ಅಂಗವಾಗಿದೆಯೆಂದರೆ ತಪ್ಪಲ್ಲ. ಧರ್ಮ–ನಂಬಿಕೆ–ಪರಂಪರೆ–ಆಚರಣೆ–ಕಲೆ–ಸಂಸ್ಕೃತಿ ಮುಂತಾದವುಗಳ ಸುತ್ತ ಹೆಣೆಯಲ್ಪಟ್ಟಿರುವ ಜಾತ್ರೆ ಒಂದು ಸಂಕೀರ್ಣ ಅನುಭವ. ಜನಸಾಮನ್ಯರ ಬದುಕಿನಲ್ಲಿ ಜಾತ್ರೆ, ಉತ್ಸವಗಳು ಅವರ ಬದುಕಿನ ವಿಧಾನವನ್ನು ತೋರಿಸಿಕೊಡುತ್ತವೆ. ಜಾತ್ರೆ ನಡೆಸದ ಜಾತ್ರೆ ನೋಡದ ಜನಪದ ಜನಾಂಗವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಈ ಜಾತ್ರೆಯೆಂದರೆ ಸಂಭ್ರಮ, ಈ ಸಂಭ್ರಮವನ್ನು ಗ್ರಾಮೀಣರು ಸಾಮೂಹಿಕವಾಗಿ ಅನುಭವಿಸುತ್ತಾರೆ. ಇತಂಹ ಜಾತ್ರೆಗಳಲ್ಲಿ ನೆಡಯವ ಹಲವು ಘಟನೆಗಳು ಸಾಹಿತ್ಯ ರೂಪದಲ್ಲಿ ರಚಿಸಿರುವ ಉತ್ತರ ಕರ್ನಾಟಕದ ಜಾತ್ರೆಗಳ ಕುರಿತು ಉತ್ತರ ಕರ್ನಾಟಕದ ಜನಪದ ಕವಿಗಳಾದ ಹಲಸಂಗಿ ಗೆಳಯರ ಗರತಿಯ ಹಾಡುಗಳು ಕೃತಿಯಲ್ಲಿ, ಸಿ.ಎಸ್.ಶಿವಕುಮಾರ ಸ್ವಾಮಿ ಸಂಪದಾನೆಯ ಕರ್ನಾಟಕ ಜಾತ್ರೆಗಳಲ್ಲಿ ಕೃತಿಯಲ್ಲಿ, ಜಾತ್ರೆ ಮತ್ತು ಸಾಹಿತ್ಯದ,ಲೇಖಕರಾದ ಡಾ. ಬಸವರಾಜ ಮಲಶೆಟ್ಟಿಯವರು ಸಂಗ್ರಹಿಸಿದ ಜಾತ್ರಾ ಸಾಹಿತ್ಯದ ಹಾಡುಗಳು, ಜಗನ್ನಾಥ ಹೆಬ್ಬಾಳೆಯವರು ಹೈದರಾಬಾದ ಕರ್ನಾಟಕ ಜಾತ್ರೆಗಳ ಕೃತಿಯಲ್ಲಿ ಉಲ್ಲೇಖಗೊಂಡ ಹಾಡುಗಳು,.ಎಮ್.ಎಸ್.ಲತೆಯವರ ಉತ್ತರ ಕರ್ನಾಟಕದ ಹಂತೀ ಹಾಡುಗಳಲ್ಲಿ ಜಾತ್ರಾ ಸಾಹಿತ್ಯಕ್ಕೆ ಸಂಭಧಪಟ ಹಾಡುಗಳು ಉಲ್ಲೇಖಗೊಂಡಿರುವದನು ನಾವು ನೋಡಬಹುದು. ಅಷ್ಟೇಯಲ್ಲದೇ ಈಗಾಗಲೇ ಹಲವಾರು ವಿದ್ವಾಂಸರು ಕನ್ನಡ ಕಾವ್ಯ ಕೃತಿಗಳಲ್ಲಿ ಜಾತ್ರೆಯ ಕುರಿತು ಉಲ್ಲೇಖಗಳು ದೊರೆತಿರುವದನ್ನು ಸಹ ಇಲ್ಲಿ ಉಲ್ಲೇಖಿಸಿದ್ದೇನೆ.

ಜಾತ್ರೆಗಳಲ್ಲಿ ಜನಸಾಮನ್ಯರ ಬದುಕಿನಲ್ಲಿ ಅನೇಕ ಅಂಶಗಳು ಕೇಂದ್ರಿಕತವಾಗಿದ್ದು ಅವುಗಳಲ್ಲಿ ಜನ ಸಾಮನ್ಯರಲ್ಲಿ ಜಾತ್ರೆಯ ಪರಿಸರ ಮತ್ತು ಆರಾಧನೆಗೊಳ್ಳುವ ದೈವಗಳ ಕುರಿತು ಸಾಹಿತ್ಯವನ್ನು ನೋಡಬಹುದು. ಗ್ರಾಮ ದೇವತೆಗಳ, ಮಾತೃ ದೇವತೆ, ಭೂಮಿದೇವತೆಗಳ, ಹಾಡುಗಳು ಜಾತ್ರೆಗಳಲ್ಲಿ ಕಂಡು ಬರುವ ತ್ರಿಪದಿ, ಗಾದೆ, ದೇವರ ಸೌಂದರ್ಯ ವರ್ಣನೆ, ರಥ ತೇರು ವರ್ಣನೆ, ಮಾರಿ ದೇವತೆ ವಿಧಾನ, ವಿವಿಧ ಜನಾಂಗಳ ದೇವರ ಹಾಡು, ಐತಿಹ್ಯ ಹೀಗೆ ನಾನಾ ಪ್ರಕಾರದಲ್ಲಿ ಜಾತ್ರಾ ಸಾಹಿತ್ಯ ಹರಡಿಕೊಂಡಿದೆ. ಅಷ್ಠಯಲ್ಲದೇ ಜಾತ್ರೆಗಳನ್ನು ಕುರಿತಂತೆ ನಮ್ಮ ಹಳಗನ್ನಡ, ನಡುಗನ್ನಡ ಕಾವ್ಯಗಳಲ್ಲಿಯೂ ಉಲ್ಲೇಖಗಳು ಕಂಡು ಬಂದಿದೆ " ಕನ್ನಡ ನಾಡಿನಲ್ಲಿ ಜಾತ್ರೆಗಳು ಉಗಮವನ್ನು ನಿಖರವಾಗಿ ಗುರುತಿಸಲು ಸಾಧ್ಯವಿಲ್ಲ. ಮೊಟ್ಟ ಮೊದಲಿಗೆ ಬ್ರಹ್ಮಶಿವನ 'ಸಮಯ ಪರೀಕ್ಷೇ' ಮತ್ತು ಜನನ್ನ 'ಯಶೋಧರ ಚರಿತ್ರೆ' ಗಳಲ್ಲಿ ಜಾತ್ರೆಗಳ ವಿವರಣೆ ಬರುತ್ತದೆ 'ತೇರು' ಎನ್ನುವ ಪದ ಪ್ರಥಮಾಗಿ ಪಂಪನಲ್ಲಿ ದೊರೆಯುತ್ತದೆ. ತೇರು ಜಾತ್ರೆಗಳ ಅನಿವಾರ್ಯ ಅಂಗವಾದ್ದರಿಂದ 1000 ವರ್ಷಗಳ ಹಿಂದಕ್ಕೆ ಜಾತ್ರೆಗಳ ಇತಿಹಾಸವನ್ನು ಒತ್ತರಿಸಲು ಸಾಧ್ಯವಿದೆ"[1] ಜಾತ್ರೆಗಳು ಪ್ರಾರಂಭವಾದ ಕಾಲದಲ್ಲಿ ಜಾತ್ರೆಗೆ ಸಂಬಂಧಪಟ್ಟ ಸಾಹಿತ್ಯವು ರಚನೆಯಾಗಿರಬಹ್ಮದು. ಕನ್ನಡ ಸಾಹಿತ್ಯದಲ್ಲಿ ಜಾತ್ರೆಗಳ ಕುರಿತು ಕಾವ್ಯಗಳಲ್ಲಿ ಉಲ್ಲೇಖವಿದೆ. "ಎಕ್ಕಲ ಹಿಂದಿನಿಂದ ದೇವಿಗೆ ಮಾಮಲಕ್ಕನಿಗಂ..ಜಾತ್ರೆಯ ಮಾಳ್ಪಂ ಮೊಕ್ಕಳಗಂ ಜೈನನಲ್ಲರ"[2] ಎಂದು ಯಶೋಧರ ಚರಿತ್ರೆಯಲ್ಲಿ ಧಾರ್ಮಿಕ ಗ್ರಂಥದಲ್ಲಿ ಕಂಡು ಬರುತ್ತದೆ. "ಅನೇಕ ಜೀವಹತಿ ತನಗೆ ಸುಖೋದ್ದೀಪನಮೆನಿಸುವ ಪಾಪಕಳಾಪಂಡಿತೆ ಚಂಡಮಾರಿ ದೇವತೆಯು ಅರಸು ಮತ್ತು ಪುರಜನರು ಚೈತ್ರವೆಂಬ ತಿಂಗಳಲ್ಲಿ ಅಖಿಲಾರ್ಚನೆವೆರಸು ಜಾತ್ರೆ ನೆರೆಯದೊಡೆ ವಿಳಯಂ"[3] ಆ ಸೇವಿಯ ಜಾತ್ರೆಗೆ ಬಂದುದಂದು ವಸಂತರ "[4] ಎಂಬ ಚಂಡಮಾರಿಯ ಭಯ ಭಕ್ತಿ ಕಂಡು ಬರುತ್ತದೆ. ನಾಗರಾಜ ಕವಿಯ " ವರುಷ ವರುಷಕ್ಕೆ ಮಾರ್ಗಶಿರ ಮಾಸದೊಳ ಜಾತ್ರೆಯಾಗಲ್"[5] ಎಂಬ ಉಲ್ಲೇಖವು "ಸಿದ್ಧರಾಮಪುರಾಣ" ದಲ್ಲಿ ಶ್ರೀ ಶೈಲಜಾತ್ರೆಯ ಸಚಿದರ್ಭ ಬಸವಪುರಾಣದಲ್ಲಿ "ವೀರಭದ್ರಜಾತ್ರೆಗೆ ಎಲ್ಲ ನಾರಿಯರು ಹೋಗುತಮಿರಲು" [6] ಎಂಬ ನಾರಿಯರು ಜಾತ್ರೆಗೆ ಹೋಗುವ

ಸಂದರ್ಭ "ತೋಂಟದ ಸಿದ್ಧೇಶ್ವರ ತಾರಾವಳಿ"[7] ಮತ್ತು "ನಂಜುಂಡೇಶನ ಜಾತ್ರೆಯ ತಾರಾವಳಿ"[8] ಗಳಲ್ಲಿ ವೈಭವದ ವರ್ಣನೆಗಳು ನೋಡಬಹುದು. ಜಾತ್ರೆಗಳನ್ನು ಕುರಿತು ಶಿಷ್ಟಕಾವ್ಯಗಳಲ್ಲೂ ಉಲ್ಲೇಖವಿದೆ "ವಿಸ್ಮಯವನು ನೋಡವೆನೆಂದು ಜಾನಜಾತ್ರೆಯಾದಾಗ"[9] ಗಾದೆಯಲ್ಲಿ ಜಾತ್ರೆಯ ವಿಶೇಷತೆ ಕಂಡು ಬರುತ್ತದೆ. ನಡುಗನ್ನಡದಲ್ಲಿ ಜಾತ್ರೆಯ ಸಾಹಿತ್ಯವು 'ಚನ್ನಬಸವ ಪುರಾಣ', 'ಚಂದ್ರಪ್ರಭ ಸಾಂಗತ್ಯ', 'ನಾಗಕುಮಾರ ಚರಿತೆ', 'ಮೋಹನ ತರಂಗಿಣಿ' ಮುಂತಾದ ಕಾವ್ಯಗಳಲ್ಲಿ ಇದರ ಉಲ್ಲೇಖಗಳಿವೆ ."[10] ಜಾತ್ರೆಗಳ ಈ ಉಲ್ಲೇಖಗಳ ಅದರ ಪ್ರಾಚೀನತೆ ತಿಳಿಸಿಕೊಡುತ್ತವೆ.

ಗಾದೆಗಳಲ್ಲಿ ಜಾತ್ರೆ:

ಜನಪದರ ಜೀವನದಲ್ಲಿ ಜಾತ್ರೆ. ತೇರು ಎಷ್ಟರ ಮಟ್ಟಿಗೆ ಹಾಸು ಹೊಕ್ಕಾಗಿ ಬೆರೆದು ಕೊಂಡಿದೆಯೆಂದರೆ, ನಿತ್ಯ ಜೀವನದಲ್ಲಿ ಅಷ್ಟೇ ಸಂಬಂಧವಾದ ಗಾದೆಗಳು ಬಳಕೆಯಲ್ಲಿವೆ. ಜನ ಸಾಮನ್ಯ ಬದುಕಿನ ಭಾಗವಾಗಿ ಗಾದೆಗಳು ಒಂದಲ್ಲ ಒಂದು ರೀತಿಯಲ್ಲಿ ಸಂಭಂದಗಳನ್ನು ಹೊಂದಿವೆ.ಜನಪದ ಸಾಹಿತ್ಯದ ಗಾದೆಗಳು ಬಳಕೆ ಮತ್ತು ಜಾತ್ರೆಯ ಉಲ್ಲೇಖೆ ಕಂಡು ಬಂದಿದೆ. ಜಾತ್ರೆಯ ಮಹತ್ವವನ್ನು ಸಾರುವು ಹಲವಾರು ಗಾದೆಗಳು ಕಂಡು ಬರುತ್ತವೆ. ಜನಪದರ ಜೀವನದಲ್ಲಿ ಜಾತ್ರೆ, ಉತ್ಸವ, ತೇರು, ಮೆರೆವಣಿಗೆ. ಇವು ಎಷ್ಟು ಹಾಸಹೊಕ್ಕಾಗಿ ಬೆರೆತುಕೊಂಡವೆಯೆಂದರೆ ಅವರ ದಿನನಿತ್ಯದ ಬದುಕಿನಲ್ಲಿ ಜಾತ್ರೆ ಸಂಬಂಧಿ ಗಾದೆಗಳು ಬಳಕೆಯಲ್ಲಿವೆ. ಊರಿಗೊಂದು ಜಾತ್ರೆ, ಮೈಲಿಗೊಂದು ಯಾತ್ರೆ ಜಾತ್ರೆ ಮತ್ತು ಯಾತ್ರ ಸ್ಥಳಗಳ ಮಹತ್ವ ಸೂಚಿಸುತ್ತದೆ. ಹಬ್ಬ ಇದ್ದರೆ ' ನಾವು ಸಿಂಗಾರ ಜಾತ್ರೆಗೆ ದೇವರು ಸಿಂಗಾರ, ಕೋಶ ಓದಬೇಕು ಜಾತ್ರೆ ನೊಡಬೇಕು,ಜಾತ್ರೇಲಿ ಜನ ಇದ್ದರ ಚೆಂದ; ಕೈಯಲಿ ಹಣ ಇದ್ದರ ಚಂದ, ಕೆಲವೊಂದು ಗಾದೆಗಳು ಜಾತ್ರೆಯ ಚಿತ್ರವೆ ಕಣ್ಣುಮುಂದೆ ಕಟ್ಟುತ್ತವೆ ಜಾತ್ರೆ ಕುರಿತಾದ ಗಾದೆಗಳು.

1. ಹೋಳಿಗೆ ಇಲ್ಲದ ಹಬ್ಬವಿಲ್ಲ, ರಥವಿಲ್ಲದ ಜಾತ್ರೆಯಿಲ್ಲ
2. ತೇರು ಅದ್ಮೇಲೆ ಜಾತ್ರೆಗೆ ಹೊಗ್ಬೇಡ; ಧಾರೆ ಆದ್ಮೇಲೆ ಮದುವೆಗೆ ಹೋಗಬೇಡ
3. ತೇರು ಹರಿದ ಮೇಲೆ ಪರಿಷೆಗೆ ಏನು ಕೆಲಸ.
4. ಹಬ್ಬದೂಟ ಚಂದ;ಜಾತ್ರೆಯ ನೋಟ ಚೆಂದ
5. ಜಾತ್ರೇಲಿ ಜನ ಹೆಚ್ಚು; ಜಗಳಗಂಟಿಗೆ ಜಂಬ ಹಚ್ಚು.

ಜಾತ್ರೆಯಲ್ಲಿ ರಥೋತ್ಸವ ಜಾತ್ರೆಗೆ ಮೆರೆಗು ತಂದು ಕೊಡುತ್ತದೆ. ಹಾಗೆಯೇ ಜಾತ್ರೆಯಲ್ಲಿ ರಥೋತ್ಸವ ಇಲ್ಲವಾದರೆ ಅದು ಸಂತೆಯ ಸ್ವರೂಪ ಪಡೆದುಕೊಳ್ಳುತ್ತದೆಂಬ ಗಾದೆ ಇದೆ. ಹಾಗೆ ಹಬ್ಬಕ್ಕೆ ಬಾಯಲ್ಲಿ ನೀರೂರಿಸುವ ಭಕ್ಷ್ಯಭೋಜ್ಯಗಳಿದ್ದರೆ ಅದು ಹಬ್ಬವೆನಿಸುತ್ತದೆ ವಿಶೇಷವಾಗಿ ಹೋಳಿಗೆ ಮುಖ್ಯವಾಗುತ್ತದೆ,ಹಾಗೇಯೇ ತೇರು ಜಾತ್ರೆಯ ಬಹು ಮುಖ್ಯ ಸಂದರ್ಭವಾಗಿರುವದರಿಂದ ತೇರು ಎಳೆದ ಮುಗಿದ ಮೇಲೆ ಜಾತ್ರೆಗೆ ಹೋದರೆ ಪ್ರಯೋಜನವಿಲ್ಲ. ಮನುಷ್ಯರು ಬದುಕಲು ಉಸಿರಾಡುಸುವ ಗಾಳಿ ಎಷ್ಟು ಮುಖ್ಯವೋ ಜಾತ್ರೆಯಲ್ಲಿ ಹಣ ಮುಖ್ಯವೆಂದು ತಿಳಿಸಲು 'ಮನುಷ್ಯನಿಗೆ ಗಾಳಿ ಮುಖ್ಯಜಾತ್ರೆಗೆ ಕಾಂಚಣ ಮುಖ್ಯ' ಎಂಬ ಗಾದೆ ಪ್ರಚಲಿತವಿದೆ, ಅದೇ ರೀತಿ ಮದುವೆಯಾಗುವಾಗ ಹೆಣ್ಣು ಮನೆಯನ್ನು ಕುಲಗೌರವನ್ನು ಉಳಿಸಿಕೊಳ್ಳಲು ಮದುವೆಯಾಗುವ ಹೆಣ್ಣು ಮನೆಯ ಕಣ್ಣು. ಕುಲನೋಡಿ ಹೆಣ್ಣು ತರಬೇಕು ಹಣ ನೋಡಿ ಜಾತ್ರೆಗೆ ಹೋಗಬೇಕು,ಉಟ ಮಾಡುವಾಗ ನೀರುಯಿಲ್ಲದೇ ಉಟಕ್ಕೆ ಕೂತರೆ ತಿಂದ ಆಹಾರ ಗಂಟಿಲಿಗೆ ಸಿಗುತ್ತದೆ. ಊಟಕ್ಕೆ ನೀರು ಬೇಕು .ಅದೇ ರೀತಿ ಜಾತ್ರೆಗೆ ಹಣವಿಲ್ಲದೇಯಿದ್ದರೆ ಜಾತ್ರೆಯಲ್ಲಿ ನಮಗೆ ಬೇಕಾದ ವ್ಯಾಪರ ವ್ಯವಹಾರಕ್ಕೆ ಗಾಗಿ ಜಾತ್ರೆಗೆ ರೊಕ್ಕ ಬೇಕು'ಈ ಗಾದೆಗಳು ಅರ್ಥಪೂರ್ಣವಾದ ನೀತಿಯಾಗಿದೆ.ಈ ಅನುಭವ ಗಾದೆ ಮಾತಿನ ಅರ್ಥ ಎಷ್ಟು ವೈಜ್ಞಾನಿಕ ಸತ್ಯವೋ ಇದರಿಂದ ಹೊರಡುವ ಅರ್ಥವೂ ಅಷ್ಟೇ ಚೆನ್ನಾಗಿದೆ. ಹಣವು ಮುಖ್ಯವಾಗಿ ಬೇಕು.ಹಣವಿಲ್ಲದಿದ್ದರೆ ಹೆಣಕ್ಕೆ ಸಮಾನ ಪ್ರತಿಯೊಂದು ಕೆಲಸಕ್ಕೂ ಹಣ ಬೇಕು ಇಲ್ಲವಾದರೆ ಹೆಣಕ್ಕೆ ಸಮ. ಹಣವಿಲ್ಲದಿದ್ದರೆ ಯಾರೂ ಹತ್ತಿರ ಸುಳಿದಾಡುವುದಿಲ್ಲ. ಹೀಗಾಗಿ ಹಣ ಬೇಕೆ ಬೇಕು. ಜಾತ್ರೆಗೆ ಹೋಗಬೇಕಾದರೂ ಹಣ ಬೇಕು. ಹಣ ಎಷ್ಟು ಇದೆ ಎನ್ನುವುದು ತಿಳಿದುಕೊಂಡು ಜಾತ್ರೆಗೆ ಹೋಗಬೇಕು. ಹಣವಿಲ್ಲದೆ ಜಾತ್ರೆಗೆ ಹೋದರೆ ಹುಚ್ಚನಂತೆ ಅಲೆದಾಡಬೇಕಾಗುತ್ತದೆ. ಜಾತ್ರೆಯಲ್ಲಿ ಏನದರೂ ಕೊಳ್ಳಬೇಕಾದರೆ ಹಣ ಬೇಕು. ಹೀಗಾಗಿ ಹಣವಿದ್ದರೆ ಮಾತ್ರ ಜಾತ್ರೆ ಮಾಡಬಹುದೆಂಬ ಮುನ್ನೆಚ್ಚರಿಕೆಯನ್ನು ಈ ಗಾದೆಗಳು ಸೂಚಿಸುತ್ತವೆ. ಗಾದೆಗಳು ಒಂದು ಪ್ರದೇಶದ ಜನರ ಜನಜೀವನವನ್ನು ರೀತಿ ನೀತಿಗಳನ್ನು ಗಾದೆಯಲ್ಲಿ ತಿಳಿಸುತ್ತದೆ. 'ಒಳ್ಳೆ ಜಾತ್ರೆ ಸೇರಿದಾಗ ಸೇರಿದ್ರು' ಭಕ್ತರು ಸೇರುವ ಬಗ್ಗೆಯನ್ನು ತಿಳಿಸುತ್ತದೆ. 'ಜನಮರಳೋ, ಜಾತ್ರೆ ಮರಳೋ' ಎಂಬ ಗಾದೆಯಲ್ಲಿ. ಜಾತ್ರೆ ಎಂದೂ ಮರಳಾಗುವುದಿಲ್ಲ ಅಲ್ಲಿರು ಜನರು ಮಾತ್ರ ಮರಳಾಗುತ್ತಾರೆ ಎನ್ನುವ ಒಳ ಅರ್ಥ ಇದರಲ್ಲಿದೆ. ನೀತಿಯ ಮಹತ್ವನ್ನು ಹೇಳುವ ಗಾದೆಗಳಲ್ಲಿ ಜಾತ್ರೆ ತಪ್ಪಿದರೂ ನೀತಿ ತಪ್ಪಬಾರದು' ನೀತಿ ಬಿಟ್ಟು ನಡೆದರೆ ಸಮಾಜ ನಂಬುವುದಿಲ್ಲ.ಕೆಲವ ಸಲ ಜಾತ್ರೆಗೆ ಹೋಗಲು ಸಮಯ ಹಾಗೂ ಹಣವಿರುವುದಿಲ್ಲ. ಕಾರಣ ಜಾತ್ರೆಗೆ ಹೋಗುವುದು ತಪ್ಪಬಹುದು. ಆದರೆ ಮೋಸದಿಂದ ಹಣ ಮಾಡಿ ಜಾತ್ರೆಗೆ ಹೋಗಬಾರದು ಎಂದು ಗಾದೆಯಿಂದ ಮನವರಿಕೆಯಾಗುತ್ತದೆ.ಜಾತ್ರೆಗೆ ಜನ ಬೇಕು ಗಂಡಿಗೆ ಹೆಣ್ಣು ಬೇಕು' ಸಂತೆ, ತೇರು, ಜಾತ್ರೆ–ಉತ್ಸವಗಳು ಜನಪದ ಸಮಾಜದ ಸಂಘಟಿತ ವ್ಯವಸ್ಥೆಯಾಗಿದೆ. ಹೀಗಾಗಿ ಜಾತ್ರೆ ಇದ್ದಲ್ಲೆ ಜನರು ಬೇಕು,ಕಳಶ ಪಲ್ಲಕ್ಕಿ ಮೆರವಣಿಗೆ ಮಾಡಲು ರಥ ತೇರು ಜಗ್ಗಲು, ಪ್ರಸಾದ ನೀಡಲು ಜಾತ್ರೆಗೆ ಜನರು ಬೇಕಾಗುತ್ತಾರೆ. ಜನರಿಂದಲೇ ಸಾಮೂಹಿಕ ಸಂಘಟನೆಯಲ್ಲಿ ನೆಡೆಯವ ಆಚರಣೆಗಳಿಂದ ಜಾತ್ರೆ ಅದ್ಧೂರಿಯಾಗುತ್ತದೆ. ಜಾತ್ರೆಗೆ ಜನರು ಮುಖ್ಯ ಒಂದೆಡೆಯಾದರೆ, ಹೆಣ್ಣು ಸಂಸಾರದ ಕಣ್ಣು, ಗಂಡಿಗೆ ಹೆಣ್ಣು ಮುಖ್ಯ ಇನ್ನೊಂದೆಡೆ. ಗಂಡಿನ ಪಾಲನೆ ಪೋಷಣೆ ಹೆಣ್ಣಿನಿಂದ ಹೆಣ್ಣಿನ ಪಾಲನೆ ಪೋಷಣೆ ಗಂಡಿನಿಂದ, ಕಾಮದ ಹಸಿವು ಪರಸ್ಪರ ಇಬ್ಬರು ಹಿಂಗಿಸಿಕೊಳ್ಳಲು, ಮಕ್ಕಳು ಹಡೆಯಲು, ಗಂಡಿಗೆ ಹೆಣ್ಣು ಹೆಣ್ಣಿಗೆ ಗಂಡು ಒಬ್ಬರಿಗೆ ಒಬ್ಬರಿದ್ದರೆ ಅಂದ ಎಂಬ ಗಾದೆ ಇದಾಗಿದೆ. ಇಂತಹ ಎಷ್ಟೋ ಗಾದೆಗಳು ಜಾತ್ರೆಯ ಕುರಿತಾಗಿರುವದನ್ನು ನೋಡಬಹುದು

ಊರಿನ ಜಾತ್ರೆಗೆ ಬಂಧು ಬಳಗದವರನ್ನು ಕರೆಸಿಕೊಳ್ಳುವುದು ಮತ್ತು ತಾವು ಬಂಧುಗಳ ಊರಿನ ಜಾತ್ರೆಗೆ ಹೋಗಿಬರುವುದು ತೀರಾ ಸಾಮಾನ್ಯ. ಗ್ರಾಮೀಣ ಜನರು ಗಡಿಬಿಡಿಯ ಬದುಕನಲ್ಲಿ ನಾಲ್ಕಾರು ದಿನ ಇದ್ದು ಜಾತ್ರೆಯ ಸೊಬಗನ್ನು ಸವಿಯುತ್ತಾರೆ. ಈ ಅವಧಿ ಅವರಿಗೆ ಒಂದು ರೀತಿಯ ವಿಶ್ರಾಂತಿಯೂ ಹೌದು. ಜಾತ್ರೆಗೆ ಬಂದವರಿಗೆ ಮೋಜು–ವಿಶ್ರಾಂತಿ ನಿಜ. ಜಾತ್ರೆಯ ಊರವರಿಗೆ ಸಂಭ್ರಮದೊಂದಿಗೆ ದಣಿವೂ ಕೂಡಿಕೊಂಡಿರುತ್ತದೆ. ಮನೆತುಂಬ ಅತಿಥಿಗಳು ತುಂಬಿಕೊಂಡಾಗ ಮನೆ ಕೆಲಸ ತುಂಬಾಯಿರುತ್ತದೆ. ಇವನ್ನೆಲ್ಲ ಮಾಡಿ ಮುಗಿಸುವಷ್ಟರಲ್ಲಿ ಜಾತ್ರೆಯ ಸಡಗರ ಮುಗಿದುಹೋಗುತ್ತದೆ. ಇಂಥ ಸಂದಿಗ್ದದಲ್ಲಿರುವ ಗರತಿಯೊಬ್ಬಳು ಹಾಡಿರುವ ಹಾಡು ಹೀಗಿದೆ.

"ತಾಯಿ ದ್ಯಾಮವ್ವನ ತೇರೆಳದ ಬರುವಾಗ
ತೀರಲಿಲ್ಲವ್ವ ಮನಿದಗದ । ನಾನಿನಗ
ಇಲ್ಲಿಂದ ಕೈಯ್ಯ ಮುಗದೇನ ॥"[11]. ಎಂದು ಹಾಡಿ ಕೊಂಡಿದ್ದಾಳೆ.

ಶಿವರಾತ್ರಿ ಮತ್ತು ಶ್ರೀಶೈಲ ಜಾತ್ರೆ ಹಾಗೂ ತೀರ್ಥಕ್ಷೇತ್ರ ಸ್ಥಳ ಕಾಶಿಯ ಬಗ್ಗೆ ಸರ್ವಜ್ಞ ಕವಿ ಅವುಗಳ ಮಹತ್ವ ಕುರಿತು ಅಭಿಮಾನದಿಂದ ಕೊಂಡಾಡಿದ್ದಾನೆ.

"ರಾತ್ರಿಯೊಳು ಶಿವರಾತ್ರಿ, ಜಾತ್ರೆಯೊಳು ಶ್ರೀಶೈಲ
ಕ್ಷೇತ್ರದೊಧಿಕ ಶ್ರೀ ಕಾಶಿ ಶಿವತತ್ವ
ಕ್ಷೇತ್ರದೊಳ ಅಧಿಕ ಸರ್ವಜ್ಞ"[12]

ಶ್ರೀಶೈಲ ಜಾತ್ರೆ ಸುಮಾರು ವರ್ಷಗಳಿಂದ ಆಚರಣೆ ಮಾಡಲಾಗುತ್ತಿದೆ ಎಂಬುದಕ್ಕೆ ಈ ಸರ್ವಜ್ಞನ ತ್ರಿಪದಿಯೇ ಸಾಕ್ಷಿಯಾಗಿದೆ. ಜಾತ್ರೆ ಮುಗಿವುದರೊಳಗಾಗಿ ಕಳವು ಮಾಡುವುದು ಚಿಕ್ಕ ಮಕ್ಕಳು ಕಳೆದ್ಹೊಗುವುದು ಸಾಮಾನ್ಯ. ಕೂಸು ಕಳೆದುಕೊಂಡು ಹಂಬಲಿಸುವ ತಾಯಿಯ ಹಾಡು ಹೀಗಿದೆ.

"ಕೂಸು ಕಂಡಿರೇ: ಅವ್ವ ನನ್ನ ಬಾಲನ ಕಂಡಿರೇ
ಜನವ ಜಾತ್ರೆಗೊಯ್ತು ನಾನು ಜಾತ್ರೆಹೋದೆ
ಜನಕಿಲ್ಲದ ಕೇಡು ನನಗಾಯಿತವ್ವ
ಕೂಸು ಕಂಡಿರೇ: ಅವ್ವ ನನ್ನ ಬಾಲನ ಕಂಡಿರೆ ೇ"
13ಎಂದು ದುಃಖಿಸುವಳು.

ಕೂಸು ಕಳೆದರೂ, ಕಳವು ಆದರೂ ಪೋಲಿಸ್ ವ್ಯವಸ್ಥೆ ಬಂದೋಬಸ್ತಾಗಿರುತ್ತದೆ. ಮಕ್ಕಳು ಕಳೆದರೆ, ಧ್ವನಿವರ್ಧಕಗಳಲ್ಲಿ ಪ್ರಸಾರ ಮಾಡುವುದು ಪ್ರತಿ ಜಾತ್ರೆಯಲ್ಲಿ ಇದೆ. ಜನಪದವರು ಜಾತ್ರೆಯ ಸ್ವರೂಪ ಕುರಿತು ಹಾಡು ಹೊಗಳಿದ್ದಾರೆ. ಅವರ ಪ್ರತಿಭೆ ಉತ್ಸವ ಕಂಡ ದೃಷ್ಟಿ ಮೆಚ್ಚುವಂಥದ್ದು, ಹೊಗಳುವಂಥದ್ದು.
ಮದುವೆ ಸಮಾರಂಭದಲ್ಲಿ ಒಡಪು ಹೇಳುವ ಸಂಪ್ರದಾಯ ಇನ್ನೂ ಇದೆ. ಸತಿಯಿಂದ ಪತಿಯ ಹೆಸರನ್ನು ಪತಿಯಿಂದ ಸತಿಯ ಹೆಸರನ್ನು ಕೇಳುವ ಪ್ರಸಂಗಗಳು ಬರುತ್ತವೆ. ಗಂಡನ, ಹೆಂಡತಿಯ ಹೆಸರನ್ನು ಹೇಳುಬೇಕು. ಆ ಭಾಗವೇ 'ಒಡಪು' ಎಂದು ಕರೆಯಲಾಗುತ್ತದೆ.

"ಜಾತ್ರೆಯಲ್ಲಿ ವೀರಭದ್ರ ಮೇಲು
ರಾತ್ರಿಯಲ್ಲಿ ಶಿವರಾತ್ರಿ ಮೇಲು
ನನಗೆ ಮಾತ್ರ ... . ಮೇಲು"[14]

ಹೀಗೆ ಒಡಪು ಪದ್ಯದ ರೀತಿಯಲ್ಲಿದ್ದು, ಜನರು ನಾಲಿಗೆಯಿಂದ ನಾಲಿಗೆಗೆ ಹರಿದು ಬಂದಿರುತ್ತದೆ. ಈ ಒಡಪುಗಳು ಬಂಧು ಬಳಗ ಆಪ್ತರಿಗೆ ಮನರಂಜನೆ ನೀಡುವುದಲ್ಲದೆ ಹೊಸ ಜೋಡಿಗಳಲ್ಲಿ (ಮದು ಮಕ್ಕಳಲ್ಲಿ) ಪರಸ್ಪರ ಪ್ರೀತಿ ಹುಟ್ಟಿಸುತ್ತದೆ. ಮತ್ತು ಹೆಚ್ಚಿಸುತ್ತದೆ. ಪೌರಾಣಿಕ ವಸ್ತು, ಪಾತ್ರ ಪ್ರಸಂಗಗಳು, ಹಾಸ್ಯ, ಶೃಂಗಾರ ಮತ್ತು ಜಾತ್ರೆ ಉತ್ಸವ ಮುಂತಾದ ಪ್ರಸಂಗಗಳು ಒಡಪುಗಳಲ್ಲಂತೂ ಯಥೇಚ್ಛವಾಗಿ ಕಂಡುಬರುತ್ತವೆ. ಜಾತ್ರೆಗೆ ಸಂಬಂಧಿಸಿದ ಒಡಪುಗಳು ಇವುಗಳಾಗಿವೆ, ಜನಪದ ಸಾಹಿತ್ಯವು ಎಂದೂ "ಬತ್ತದ ಒರತೆ" ಏಕೆಂದರೆ ಜನಪದರಿಗೆ ಜೀವನವೇ ಒಂದು ಪಾಠಶಾಲೆ ಹೀಗಾಗಿ ಅವರ ಕಾವ್ಯಕುಂಜದಲ್ಲಿ ಅಳವಡಿಸಿಕೊಳ್ಳದ ದೇವರಿಲ್ಲ ವಸ್ತುಗಳಲ್ಲ ಶಾಸನಗಳಲ್ಲಿ ಲಿಖಿತರೂಪದ ಸಾಹಿತ್ಯವನ್ನು ಕಾಣುತ್ತೇವಾದರು ಅದಕ್ಕೆ ಮೂಲ ಮೌಖಿಕ ಪರಂಪರೆಯ ಜನಪದ ಸಾಹಿತ್ಯವಾಗಿದೆ.
ಸಾಮಾಜಿಕ ಜೀವನದಲ್ಲಿ ಸಾಹಿತ್ಯದ ಪಾತ್ರ ಮಹತ್ವಪೂರ್ಣವಾದುದು. ಒಳ್ಳೆಯ ಕವಿಗಳು ಒಳ್ಳೆಯ ಕೃತಿಗಳು ದೊರಕುವುದಾದರೆ ಅದು ನಿಜಕ್ಕೂ ಭುವನದ ಭಾಗ್ಯವೇ ಸರಿ. ಸಾಹಿತ್ಯವೆನ್ನುವದು ಸಂಜೀವಿನಿ ಇದ್ದ ಹಾಗೆ ಅದು ಕಲ್ಲು ಹೃದಯವನ್ನು ಕರಗಿಸುತ್ತದೆ.ಬದುಕಿಗೆ ಬೇಕಾದ ಪ್ರೀತಿ, ಮಮತೆ, ಕರುಣೆ ಮೊದಲಾದವುಗಳನ್ನು ನೀಡುತ್ತದೆ. ಈ ನಿಟ್ಟಿನಲ್ಲಿ ಜಾತ್ರಾ ಸಂಬಂಧಿ ಸಾಹಿತ್ಯವು ಹುಟ್ಟಿ, ಜಾತ್ರೆಯಲ್ಲಿಯೇ ಬೆಳೆದು ಬಂದಿದೆ. ನಮ್ಮ ನಾಡಿನಲ್ಲಿ ಜಾತ್ರೆಗಳಿಲ್ಲದ ಗ್ರಾಮಗಳಿಲ್ಲ.ಜನಪದ ಕಲೆಗೂ ಮತ್ತು ಜಾತ್ರೆಗೂ ಅವಿನಾಭಾವ ಸಂಬಂಧವಿರುವಂತೆ ಜಾತ್ರೆ ಮತ್ತು ಸಾಹಿತ್ಯಕ್ಕೂ ಅದೇ ನಚಿಟಿದರೆ ಜಾತ್ರೆಗಳಿಗೆ ಜನಪದ ಕಲೆಗಳಿಗೆ ಸ್ಫೂರ್ತಿದಾಯಕವಾದಂತೆ ಸಾಹಿತ್ಯದ ಬಹುಮುಖ ಸೃಷ್ಟಿಗೂ ಪ್ರೇರಣೆ ನೀಡಿದೆ.ಜನಪದರ ಕಲ್ಪನಾ ಪ್ರತಿಭೆ ಎನ್ನುವುದು ದೈತ್ಯವಾದುದು.ಇದಕ್ಕೆ ನಮ್ಮ ಶಿಷ್ಟ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳು ಜನಪದರ ನಾಲಿಗೆಯ ಮೇಲೆ ಇನ್ನೂ ಬೆಳೆಯುತ್ತಿರುವುದೆ ಇದಕ್ಕೆ ಸಾಕ್ಷಿ. ಹಾಗೆಯೇ ದೇವರು ಮತ್ತು ಜಾತ್ರೆಯ ಕುರಿತು ಸಾಹಿತ್ಯ ಸೃಷ್ಟಿಯೂ ಆಗಾಧವಾಗಿದೆ.

ಜಾತ್ರೆ ತ್ರಿಪದಿ

ತ್ರಿಪದಿ ಎಂದರೆ ಮೂರು ಪಾದಗಳುಳ್ಳ ಅಂಶಗಣಬದ್ಧವಾದ ಒಂದು ಪದ್ಯ. ಇಂತಹ ಪದ್ಯರೂಪದಲ್ಲಿರುವ ಹಾಡುಗಳನ್ನು ಜನಪದರು ಜಾತ್ರೆಗಳ ಕುರಿತು ನೀಡಿದ ಸ್ಥಾನ–ಮಾನ, ವರ್ಣನೆ, ತೇರು – ಪಲ್ಲಕ್ಕಿ, ಇನ್ನಿತರ ಸಂಬಂಧ ಕುರಿತು ಹಾಡಿ–ಹರಸಿದ್ದು ಇಲ್ಲಿ ಸ್ಮರಿಸಬಹುದು. ಜಾತ್ರೆಗೆ ತೇರು ಪ್ರಮುಖ ಅಂಗವಾಗಿದ್ದರಿಂದ ಜನಪದರು ಅದಕ್ಕೆ ಸಮಂಜಸವಾದಂತ ತ್ರಿಪದಿಗಳನ್ನು ಹೇಳಿದ್ದು ಜಾನಪದ ಸಾಹಿತ್ಯಕ್ಕೆ ಹಿರಿಮೆಯ ಗರಿ ಹೆಚ್ಚಿದಂತಾಗಿದೆ. ತೇರಿನ ಅಲಂಕಾರವನ್ನು ಜನಪದ ಕವಿಗಳು ಧಾರಾಳವಾಗಿ ವರ್ಣಿಸಿದ್ದಾರೆ. ಎಲ್ಲಾ ಜಾತ್ರೆಗಳಲ್ಲಿ ಸಾಯಂಕಾಲ ಎಳೆ ಬಿಸಿಲಿನಲ್ಲಿ ತೇರು ಎಳೆಯುವುದರಿಂದ ಅದಕ್ಕೆ ಇನ್ನಷ್ಟು ಅಂದ ಹೆಚ್ಚಾಗಿ ಕಂಡು ಬರುವುದಲ್ಲದೇ, ತೇರಿನ ಎತ್ತರ ಅಲ್ಲಿ ನೆರೆದ ಜನಸ್ತೋಮಕ್ಕೆ ಮೂಕವಿಸ್ಮಯವಾಗಿ ಮಾಡುತ್ತದೆ. ಇದಕ್ಕೆ ಸಂಬಂಧ ಪಟ್ಟ ತ್ರಿಪದಿ ಹೀಗಿದೆ.

ಗ್ವಾಲಗೇರಿ ತೇರ ಮ್ಯಾಲಕ ಬಹುದೂರ
ಗಾಳಿ ಬೀಸಿದರ ಬಲಕುವದೋ ।ಆತೇರ
ಎಳೆಯ ಬಿಸಿಲೀಗೆ ಹೊಳೆದೀಪ ।"। [15]

ಜಾತ್ರೆಯಲ್ಲಿ ತೇರನ್ನು ಅಂದವಾಗಿ ಶೃಂಗರಿಸುವ ಕಲೆ ಜನಪದ ಅಲಂಕಾರಕ್ಕೆ ಸಾಕ್ಷಿಯಾಗಿದೆ. ತೇರನ್ನು ಕಬ್ಬು,ಬಾಳೆ, ತೆಂಗಿನ ಗರಿ, ಗೊಂಬೆ ಹಕ್ಕಿಗಳನ್ನು ಮಾಡಿ ಕಟ್ಟಿರುತ್ತಾರೆ. ಈ ನಿರ್ಜೀವ ವಸ್ತುಗಳು ಆ ಸಮಯದಲ್ಲಿ ತೇರಿಗೆ ಒಂದು ಬಗೆಯ ವಿನ್ಯಾಸ ಕಲ್ಪಿಸುತ್ತವೆ. ಇದರ ಕುರಿತಾದ ತ್ರಿಪದಿ ಹೀಗಿದೆ.

ಆರೂಢ ಸ್ವಾಮಿ ನಿನ್ನ ತೇರಿನ ಕಳಸದ ಮ್ಯಾಲ।
ಮಾಗಿಮಾವಿನ ಹಣ್ಣ ಗಿಣಿಕಚ್ಚಿ । ಒಯ್ವಾಗ।
ಕಾಯಣ್ಣ ಬಾಯಿ ಬಿಡತಿದ್ದ." [16]

ಅಲಂಕಾರಕ್ಕಾಗಿ ಕಟ್ಟಿದ ಹಣ್ಣನ್ನು ನಿಜವಾದ ಹಣ್ಣೆಂದು ಭಾವಿಸಿ ಗಿಣಿಕಚ್ಚಿಕೊಂಡು ಹೋಗುವಾಗ ತೇರಿನ ಕಾವಲುಗಾರನು ದಿಕ್ಕು ತೋಚದೆ ಬಾಯಿ ಬಿಡುತ್ತಿದ್ದನೆಂದು ಹೇಳುವ ಈ ತ್ರಿಪದಿ ಕಲ್ಪನೆ ಹೃದ್ಯವಾಗಿದೆ.
ಕಲಕೇರಿ ತೇರಿನ ವರ್ಣನೆ ನಮ್ಮ ಜನಪದರು ಬಾಳೆ ಹಣ್ಣಿನ ಹಳದೀ ಬಣ್ಣಕ್ಕೆ ಹೋಲಿಸಿದ್ದಾರೆ. ಬಾದಾಮಿಯ ಎಲೆ ಜಿಲ್ಲೆಯಲ್ಲಿ

ಪ್ರಸಿದ್ಧಿ ಪಡೆದಿವೆ. ಇದಕ್ಕೆ ಪೂರಕವಾಗಿ ಕಲಕೇರಿ ತೇರು ಕೂಡಾ ಅಷ್ಟೇ ಪ್ರಾಮುಖ್ಯತೆ ಪಡೆದಿದೆ. ಅದನ್ನು ವರ್ಣಿಸುವ ಈ ತ್ರಿಪದಿ ವಾಸ್ತವಿಕತೆಗೆ ಮೆರಗು ನೀಡುತ್ತದೆ. ಬಾಳೆ ಹಣ್ಣಿನ ಮಾಟ ಬಾದಾಮಿ ಎಲೆತೋಟ।

ಬಾಗಿಲಗಾಡುವ ಮಗನಾಟ ।ಕಲಕೇರಿ।
ತೇರಿನ ಮಾಟ ಬಲು ಮಾಟ"॥ [17]
ಅಪ್ಪನ ತೇರಿಗೆ ಇಪ್ಪತ್ತು ಮಿಣಿ ಹೂಡಿ।
ಮನ್ನೆ ಮನ್ನೇರ ಕೈಗಲಸಿ । ಎಳದಾರೋ।

ಅಪ್ಪ ಶರಣಪ್ಪನ ಹೊಸತೇರೋ॥ [18]. ಜಾತ್ರೆಗೆ ಬಂಧು–ಬಳಗ ಸೇರುವುದು ಸಾಮಾನ್ಯ. ಕೆಲವೊಮ್ಮೆ ಜಾತ್ರೆಗಳು 4–5 ದಿವಸದವರೆಗೆ ಜರುಗುತ್ತವೆ. ಈ ಸಮಯದಲ್ಲಿ ಮನೆಗೆ ಬಂದ ಅಥಿತಿಗಳನ್ನು ಸಂತೈಸಿ ಸತ್ಕರಿಸುವುದರಲ್ಲಿ ನಿರತರಾಗಿದ್ದರಿಂದ ಜಾತ್ರೆಗೆ ಹೋಗಲು ಬಿಡುವಿಲ್ಲದ ಸಮಯದಲ್ಲಿ ಗರತಿಯೊಬ್ಬಳು ಹೀಗೆ ನುಡಿದದ್ದು ಕಾಣುತ್ತೇವೆ।

ತಾಯಿ ದ್ಯಾಮವ್ವನ ತೇರೆಳೆದು ಬರುವಾಗ ।
ತೀರಲಿಲ್ಲವ್ವ ಮನಿದಗದ ।ನಾನಿನಗ ।
ಇಲ್ಲಿಂದಕೈಮುಗದೇನ॥"[19].

ಜಾತ್ರೆ ಸಾಹಿತ್ಯ – ಪ್ರಣಯ:

ಜಾತ್ರೆಗೆ ಹೋಗಿ ಎಲ್ಲರೂ ಸಂತೋಷ ಪಡುವದು ಒಂದಡೆಯಾದರೆ, ಪ್ರೇಮಿಗಳು ಜೋಡಿಯಾಗಿ ಹೋಗಿ ಸಂತೋಷಪಡುವದು ಕಾಣುತ್ತೇವೆ. ಕೆಲವೊಮ್ಮೆ ಒಬ್ಬಂಟಿಗರಾಗಿ ಜಾತ್ರೆಗೆ ಹೋಗಿ ಅಲ್ಲಿ ಸಂಗಾತಿಯನ್ನು ಹುಡುಕುವುದು ಹೊಸದೇನಲ್ಲ. ಜಾತ್ರೆ ಸಂದರ್ಭದಲ್ಲಿ ಸೀಮಿತವಾಗಿರುವ ಸೂಳೆಯರು ಅಲ್ಲಿ ಬಂದಿರುತ್ತಾರೆ. ರಸಿಕರು, ಯೌವನದ ಹುಡುಗರು ಇವರ ಹಾವ–ಭಾವ ಮತ್ತು ಬಣ್ಣಕ್ಕೆ ಮರುಳಾಗಿ ಹಿಂಬಾಲಿಸುವುದು ಕಾಣುತ್ತೇವೆ. ಈ ಸಂದರ್ಭದಲ್ಲಿ ಒಬ್ಬ ಗರತಿ ಜಾತ್ರೆಗೆ ಹೋದ ತನ್ನ ಅಣ್ಣನ ಕುರಿತು ಹೀಗೆ ಹೇಳುತ್ತಾಳೆ.

ಯಾಕವ್ವ ನನ್ನ ಜೀವ ಜಾಚಲಿ ಒಲ್ಲದ ।
ಜಾತ್ರೀಗಿ ಹ್ವಾದಣ್ಣ ಬರಲಿಲ್ಲ । ಅಣ್ಣಯ್ಯನ।
ಜಾತಗಮನ್ಯಾರು ಬಿಡಲಿಲ್ಲ"[20]

ಜಾತ್ರೆಯಲ್ಲಿ ತನ್ನ ಪ್ರಿಯತಮನನ್ನು ಕಾಣುವ ಆತುರ ಒಬ್ಬಳಿಗೆ. ಅವಳು ಉದ್ವೇಗ ಸಡಗರದಿಂದ ಜಾತ್ರೆಗೆ ಹೋಗುತ್ತಾಳೆ. ಅವಳ ಪ್ರಿಯತಮ ಸಿಗುವುದಿಲ್ಲ. ಅವಳ ಪ್ರೇಮೋನ್ಮಾದದ ನಿರಾಶೆಗಳು ವರ್ಣಿಸುವ ತ್ರಿಪದಿ ಹೀಗಿದೆ.

ಜಾತ್ರೀಗ್ಹೋಗುದಕ ರಾತರೀಲಿ ಎದ್ದಾಳ ।
ದೋತರತುಂಬ ಕರಿಗಡಬ । ಕಟಗೊಂಡ ।

ಜಾತಜಾ ತರಿ ಹುಡಕ್ಯಾಳ"[21] ಜಾತ್ರೆಯ ಸಮೂಹದಲ್ಲಿ ರೂಪವಮತನನ್ನು ಕಂಡು ಅವನ ರೂಪಕ್ಕೆ ಬೆರಗಾಗಿ ಒಬ್ಬ ಬಾಲೆ ತನ್ನ ಮನಸ್ಸಿನಲ್ಲಿಯೇ ಹೀಗೆ ವರ್ಣಿಸುತ್ತಾಳೆ.

ಕಂಚಿನಂಗ ಹೊಲವುತಾನೆ9
ಗೊಂಚಿನ್ ಬಾವಲಿ ಕಿವಿಯೊಳಿಟ್ಟು
ಲಿಂಗನ ಜಾತ್ರೆಗೊಬ್ಬ ಸಿಪಾಯ್ ಬಂದು
ಒಳ್ಳೆ ಒಳ್ಳೆ ಹೆಂಗಸರು ಮರುಳಾಗಿ ನಿಂತರು
ಹೊರಳಿ ನೋಡವಲ್ಲ ಕಣ್ಣ ತಗದು॥ [22]

ಪ್ರೇಮಿಗಳ ಪ್ರಣಯ ಪ್ರಸಂಗಗಳನ್ನು ಚಿತ್ರಣ ನೀಡುವ ಹಲವಾರು ಜನಪದ ಹಾಡುಗಳಲ್ಲಿ ಕಾಣುತ್ತೇವೆ. ಯುವ ಪ್ರೇಮಿಗಳಿಗೆ ಜಾತ್ರೆಗಳು ಅಂತ್ಯಂತ ಸಂತೋಷ ಉಲ್ಲಾಸ ಒದಗಿಸುವುದು ಸಹಜ. ಒಬ್ಬ ಪ್ರೀಯತಮ ತನ್ನ ಸಂಗಾತಿಗೆ ಜಾತ್ರೆಯಲ್ಲಿ ಹೇಗೆ ಸುಖ ಪಡೆಯಬೇಕು ಎಂಬುದನ್ನು ಈ ಸಾಲುಗಳಿಂದ ತಿಳಿಯಬಹುದು.

ದುಂದಮಾಡಿ ದುಮ್ಮನ ಜಾತ್ರೀಗ್
ಹೋಗಾನ್ನಡಿ ಬಂದೀ ಮುರಿಸಿ ಲಡ್ಡು ಮಿಠಾಯ್
ತರಸೇನ್ ನಡಿ ಕಂಡಿನೋಡಿ ಕಳ್ಳಿಸಾಲಾಗ್
ಮಲಗೋನ್ ನಡಿ ಎಚ್ಚರಿಕಾದಾಗ ಎದ್ದ ನಾನು
ತಿಂತೀನ ನಡಿ ತಿಂದು ಉಳಿದ್ರೆ ನಿನಗಿಷ್ಟು ಕೊಡ್ತೀನಿ ತಡಿ॥ [23].

ಊರಿನಲ್ಲಿ ಸಿಗದ ವಸ್ತುಗಳನ್ನು ಹಳ್ಳಿಗರು ಜಾತ್ರೆಯಿಂದ ಖರೀದಿಸುವ ಪದ್ಧತಿ ಇದೆ. ಕೆಲವೊಮ್ಮೆ ಆ ವಸ್ತುಗಳು ಊರಲ್ಲಿಸಿಕ್ಕರೂ ಅಲ್ಲಿಖರೀದಿಸದೇ, ಜಾತ್ರೆಯಲ್ಲಿ ಖರೀದಿಸಿ, ಉಲ್ಲಾಸಭರಿತರಾಗಿ ಮನೆಗೆ ತಂದು ಹಂಚುವುದರಲ್ಲಿ ಜನಪದರು ಖುಷಿಪಡುತ್ತಾರೆ. ಈ ಹಿನ್ನಲೆಯಲ್ಲಿ ಒಬ್ಬನು ಅತ್ತಿಯ ಮಗಳಿಗೆ ಜಾತ್ರೆಯಿಂದ ಬಳೆ, ಹೂ ತಂದು ಕೊಡುತ್ತೇನೆಂದು ಭಾಷೆ ಕೊಡುವ ತ್ರಿಪದಿ ಹೀಗಿದೆ.

ಜಾತ್ರೆಗೆ ಹೋಯ್ತೀನಿ ಜವನವ ತತ್ತೀನಿ ।
ಹೂವ ತತ್ತೀನಿ ತುರಬೀಗೆ । ಅತ್ತೀ ಮಗಳೇ ।
ಬಂದಿ ತತ್ತೀನಿ ಬಲಗೈಗೆ ॥

ಪ್ರೀತಿಸುವವರು ಜಾತ್ರೆಯಲ್ಲಿ ತಿಂಡಿ–ತಿನಿಸುಗಳನ್ನು ಖರೀದಿಸಿ, ತಮ್ಮ ಪ್ರಿಯತಮೆಗೆ ತಿನಿಸುವುದರ ಕುರಿತು ಈ ತ್ರಿಪದಿ ಹೀಗಿದೆ. ಜಾತ್ರೆಗೆ ಹೋದ ತನ್ನ ಗಂಡ ಬೇಗ ಮರಳಿ ಬರದಿದ್ದಾಗ, ಗರತಿಯೊಬ್ಬಳು ಹೀಗೆ ಚಿಂತಿಸುತ್ತಾಳೆ.

ಯಾಕವ್ವ ನನ ಜೀವ ಜಾಚೇಲಿವಲ್ಲದ ।
ಜಾತ್ರಿಗೋದವರು ಬರಲಿಲ್ಲಾ । ಇಂದಿನ ।
ರಾತ್ರಿ ಹ್ಯಾಂಗಾರ್ ಕಳೆಯಲಿ" [24]

ಇಂತಹ ಶೃಂಗಾರಭರಿತ ಹಾಡುಗಳು ಜನಪದರಲ್ಲಿ ಪ್ರಚಲಿತವಿದೆ.

ಜಾತ್ರೆ ಸಾಹಿತ್ಯ–ಸ್ನೇಹ–ಸಂಬಂಧಗಳು

ಸ್ನೇಹ ಮನವನ ಜೀವನದ ಶ್ರೇಷ್ಠ ಮೌಲ್ಯ. ಒಂದು ಅಮೂಲ್ಯ ಸ್ನೇಹದ ಸಂಕೋಲೆ ಪ್ರೀತಿ ವಾತ್ಸಲ್ಯ ಗೆಳೆತನವನ್ನು ಭದ್ರಪಡಿಸುತ್ತದೆ. ಸ್ನೇಹದಲ್ಲಿ ಕೆಲವೊಮ್ಮೆ ಒಬ್ಬರಿಗೊಬ್ಬರು ತಮ್ಮ ಜೀವನ ಮುಡಿಪಾಗಿಟ್ಟಿದ್ದು ಕಾಣುತ್ತವೆ. ಗಾಢವಾದ ಗೆಳೆತನ ಇರುವ ಮಿತ್ರರಲ್ಲಿ ಒಬ್ಬನು ಸ್ವಲ್ಪ ಸಮಯ ಅಗಲಿದರೆ ಇನ್ನೊಬ್ಬನಿಗೆ ಆಗುವ ಚಂಚಲತೆ ಹೇಳಲಾಗದು. ಇಂತಹ ಸ್ನೇಹ ಹೊಂದಿದ ಗೆಳೆಯನೊಬ್ಬನು ಜಾತ್ರೆಗೆ ಹೋಗಿ ತನ್ನ ಗೆಳೆಯನನ್ನು ಕಾಣಬೇಕೆಂದು ಅಪೇಕ್ಷಿಸುತ್ತಾನೆ. ಅವನು ಸಿಗದಿದ್ದಾಗ ನಿರಾಶೆ ಹೊಂದುವ ಈ ತ್ರಿಪದಿಯಲ್ಲಿ ಹೀಗೆ ಅಭಿವ್ಯಕ್ತವಾಗಿದೆ.

ಗೆಳೆಯ ಬರತಾನಂತ ಜಾತ್ರೀಗಿ ನಾ ಹೋದೆ ।
ಗೆಳೆಯ ಬರಲಿಲ್ಲೋ ಜಾತ್ರೀಗಿ। ಗ್ವಾಲಗೇರಿ ।
ತೇರ ಬರಲಿಲ್ಲೋ ಜಾಗಕೋ"[25].

ಬೇರೆ ಊರಿನ ಜಾತ್ರೆಗೆ ಹೋಗುವವರು ಹಲವಾರು ಉದ್ದೇಶಗಳನ್ನು ರೂಪಿಸಿಕೊಂಡು ಹೋಗಿರುತ್ತಾರೆ. ಇಲ್ಲಿ ಗರತಿಯೊಬ್ಬಳು ಈ ಸಂದರ್ಭದಲ್ಲಿ ತನ್ನ ತಾಯಿಯ ಭೆಟ್ಟಿಗೆಂದೇ ಜಾತ್ರೆಗೆ ಹೋಗುತ್ತಾಳೆ. ತಾಯಿ ಸಿಗದಿದ್ದಾಗ ಅವಳ ಮನಸ್ಸಿಗಾದ ಬೇಸರ ಕೆಲಗಿನ ತ್ರಿಪದಿ ಹೀಗೆ ಧ್ವನಿಸುತ್ತದೆ.

ಜಾಣೆ ಬರತಾಳಂತ ಜಾತರಿಗೆ ಹ್ವಾದೀನ ।
ಜಾಣೆ ಹಡೆದವ್ವ ಬರಲಿಲ್ಲ । ಚಿಂತಲಿ ।

ಜಾತರಿ ನನಗೆ ಸೊಗಸಿಲ್ಲ ॥ [26]. ತಂಗಿಯೊಬ್ಬಳು ತನ್ನ ಅಣ್ಣನ ಶೃಂಗಾರವನ್ನು ಅಲಂಕರಿಸುತ್ತಾ ಬೇಗ ಜಾತ್ರೆಗೆ ಹೋಗಿ ತೇರೆಳೆದು ಬರಲು ಹೇಳುವ ಅಣ್ಣ–ತಂಗಿಯರಲ್ಲಿದಮೈತ್ರಿಯನ್ನು ಈ ತ್ರಿಪದಿ ಬಿಚ್ಚಿಡುತ್ತದೆ.

ಹೋಗಣ್ಣನ ಕೈಯಾಗ ಹೊಳೆವೆರಡು ಉಂಗಾರ ।
ಹೋಗು ನಿನದಾರಿ ಬಲುದೂರ । ಸಂಗಮದ ।
ತೇರು ನಿನಗಾಗಿ ತಡೆದಾವು”[27].

ಜಾತ್ರೆ ಸಾಹಿತ್ಯ–ಅಲಂಕಾರ:

ಜನಪದರು ವರ್ಷವಿಡೀ ಎತ್ತು, ಗಾಡಿ, ನೇಗಿಲು ಹೀಗೆ ಹಲವಾರು ಬಗೆಯ ಕೆಲಸಗಳಿಂದ ಮಣ್ಣಿನ ಜೊತೆಗೆ ಮಿತ್ರತ್ವ ಬೆಳೆಸಿಕೊಂಡು ಹಗಲಿರುಳು ಬರೀಮೈಯಿಂದ ದುಡಿಯುತ್ತಾರೆ. ಜಾತ್ರೆ–ಉತ್ಸವ ಸಂದರ್ಭದಲ್ಲಿ ಇವರೂ ಒಳ್ಳೆಯ ವೇಷ–ಭೂಷಣ ಮಾಡಿಕೊಂಡು ಜಾತ್ರೆಗೆ ಹೋಗಬೇಕೆನ್ನುವ ಚಪಲತೆ ಮೂಡುತ್ತದೆ. ಇದರ ಕುರಿತಾಗಿ ತ್ರಿಪದಿ ಹೀಗಿದೆ.

ಜಾತ್ರೀಗಿ ಹೋಗಲಾಕ ಜರದ ರುಮಾಲಬೇಕ ।
ಮ್ಯಾಲಬಂಗಾರ್ದು ಕೊಡಿಬೇಕ । ಶರಣಪ್ಪನ ।
ತೇರು ಎಳೆದುಬರಬೇಕೋ॥”[28].

ಹೀಗೆ ಜರದ ರುಮಾಲ, ಬಂಗಾರದ ಛತ್ರಿಯೊಂದಿಗೆ ಜಾತ್ರೆಗೆ ಹೋಗುವುದು ಜನಪದರ ಹೃದಯ ಶ್ರೀಮಂತಿಕೆ ಹಾಗೂ ಸದೃಢ ಆರ್ಥಿಕ ಸ್ಥಿತಿಯನ್ನು ತಿಳಿಸುತ್ತದೆ. ಜನಪದರು ಜಾತ್ರೆಗೆ ಹೋಗಬೇಕಾದರೆ ಬಟ್ಟೆಗಳ ಮೇಲೆ ಆಸೆ ಇರುತ್ತದೆ.

ಜಾತ್ರೆ ಸಾಹಿತ್ಯ–ಪ್ರಮಾಣ, ಆಮಂತ್ರಣ :

ಹಳ್ಳಿಗರ ಭಯ–ಭಕ್ತಿ ಮತ್ತು ಹರಕೆಯಿಂದ ಜಾತ್ರೆಗಳು ಜರುಗುತ್ತವೆ. ತಮ್ಮ ಹರಕೆಯನ್ನು ಸಲ್ಲಿಸಲು ತೇರಿನ ದಿವಸ ಜಾತ್ರೆ ನೆರೆದ ಊರೇ ಆಗಲಿ ಅಥವಾ ನೆರೆಯ ಹಳ್ಳಿಯಾಗಲಿ, ಊರ ಜನರು ಒಬ್ಬರನೊಬ್ಬರು ತೇರಿನ ಸಲುವಾಗಿ ಹೋಗಲು ಆಮಂತ್ರಣ ಕೊಡುವ ಪದ್ಧತಿಯ ಈ ಹಾಡು ಹೀಗಿದೆ.

ತೇರಗೋಗಾನ ಬನ್ನಿರೋ ಸ್ವಾಮಿ
ರಥಗ್ಹೋಗಾನ ಬನ್ನೀರೋ
ರಥಗ್ಹೋಗಾನ ಬನ್ನಿರೋ ಸ್ವಾಮಿ
ಜಾತ್ರಿಗ್ಹೋಗಾನ ಬನ್ನೀರೋ॥”[29].

ಜಾತ್ರೆ ಸಾಹಿತ್ಯ–ನಂಬಿಕೆ, ಸಂಪ್ರದಾಯ

ಜಾತ್ರೆಯ ಸಂದರ್ಭದಲ್ಲಿ ನಡೆಯುವ ಧಾರ್ಮಿಕ, ಸಂಪ್ರದಾಯಕ ಕ್ರಿಯೆಗಳನ್ನು ವಿಧಿ–ಪ್ರಧಾನಗಳನ್ನು ಬಿಡಿಬಿಡಿಯಾಗಿ ವರ್ಣಿಸುವ ತ್ರಿಪದಿಗಳಿವೆ. ಇಡಿ ಜಾತ್ರೆಯ ಕ್ರೀಯಾ ವಿಧಿ–ವಿಧಾನಗಳನ್ನು ಕ್ರಮಬದ್ಧವಾಗಿ ವಿವರಿಸುವದು ಕಂಡುಬರುವುದಿಲ್ಲ. ತಮ್ಮ ಕಣ್ಣಿಗೆ ಬೆರಗುಂಟು ಮಾಡುವ ಆಕರ್ಷಕ ಅಂಶಗಳಿಗೆ ಮಾತ್ರ ಜನಪದರು ಗಮನ ಹರಿಸಿದ್ದಾರೆ.

ಬಡಿಗೇರ ಮನೆಮುಂದ ಸಡಗರದ ಗಿಡಹುಟ್ಟಿ ।
ಕೊರೆದೆರಡು ಗಾಲಿ ಸವಮಾಡಿ । ದ್ಯಾಮವ್ವ ।
ಜಡದ ಏರ್ಯಾಳ ಹೊಸತೇರ ॥”[30]

ಜನಪದರು ದೇವರ ಸನ್ನಿಧಿಯಲ್ಲಿ ಹರಕೆಯನ್ನು ಬೇಡಿಕೊಳ್ಳುವುದು ಸಹಜವಾಗಿದೆ. ಅದರಲ್ಲೂ ವಿಶಿಷ್ಟವಾಗಿ ಹೆಣ್ಣುಮಕ್ಕಳು ಬಂಜೆತನ ಹೋಗಲಾಡಿಸುವ ಹರಕೆಯನ್ನು ಬೇಡಿಕೊಳ್ಳುತ್ತಾರೆ. ತೇರ ಎಲೆಯುವ ಸಂದರ್ಭದಲ್ಲಿ ಮಿಣಿಗೆ ಕೈ ಹಚ್ಚುವುವದರಿಂದ ಮಕ್ಕಳು ಪಡೆಯುತ್ತೇವೆ ಎನ್ನುವ ಗಾಢವಾದ ನಂಬಿಕೆ ಕಂಡು ಬರುತ್ತದೆ. ಇದಕ್ಕೆ ಸಮಂಜಸವಾದ ಹಾಡು ನೊಡಬಹುದು.

ತೇರು ಬರುತಿದೆ ಕೈ ಹಚ್ಚೆ ನಮ್ಮವ್ವ
ಕೈ ಹಚ್ಚೆ ನಮ್ಮವ್ವ । ಬಂಜೆ
ಶಬ್ದ ಮಾಯ ಹಡೆದವ್ವ ॥”[31]

ನಂಬಿಕೆ, ಸಂಪ್ರದಾಯಗಳಂತೆ ತೇರೆಳೆಯುವಾಗ ಹಳ್ಳಿಯ ಜನರು ಭಯ–ಭಕ್ತಿಯಿಂದ ಕೈಮುಂದೆ ಮಾಡಿ, ದೇವರ ಹೆಸರಲ್ಲಿ ಅನೇಕ ಹರಕೆಯನ್ನು ಬೇಡಿಕೊಂಡು ತಮ್ಮ ನಿತ್ಯ ಜೀವನದ ಅಪೂರ್ಣ ಬೇಡಿಕೆಗಳ ಕುರಿತು ಬೇಡುವದು ಸಹಜ. ಈ ಸಮಯದಲ್ಲಿ ತಾಯಿ–ಮಗಳಿಗೆ ಹೇಳುವ ತ್ರಿಪದಿ ಹೀಗಿದೆ.

ತೇರು ಹರಿದಾವು ತಾನಕೆ ನಿಮತಾವು ।
ತಾರೋ ಚನ್ನಯ್ಯದವನವ । ಬಾಳೆ ಹಣ್ಣು ।
ಬೇಡಿಕೊಳ್ಳಿ ಮಗಳೇ ಸೆರಗೊಡ್ಡಿ ॥”[32]

ನಮ್ಮ ದೇಶ ಜನಸಂಖ್ಯೆಯಿಂದ ತುಂಬಿ ತುಳುಕಾಡುತ್ತಿದೆ. ಅನೇಕ ಸಮಸ್ಯೆಗಳು ಹುಟ್ಟಿಕೊಂಡಿವೆ. ಹೀಗಾಗಿ ‘ಮನಗೊಂದು ಮಗು ಸಾಕು’ ಎನ್ನುವ ಘೋಷಣೆ ಸರ್ಕಾರದ್ದಾಗಿದೆ. ಆದ್ದರಿಂದಲೇ ಈ ಒಡಪು ಹುಟ್ಟಿಕೊಂಡಿರಬೇಕು.

“ಊರಿಗೊಂದು ಗುಡಿ ಚಂದ
ಮನೆಗೊಂದು ಮಗು ಚಂದ
ವರ್ಷಕ್ಕೊಂದು ಬಸವಣ್ಣನ ಜಾತ್ರೆ ಬಲು ಅಂದ
------ ನನಗೆ ಪಸಂದ”[33]

ಬಸವಣ್ಣನವರು ಮಾಡಿದ ಸಾಮಾಜಿಕ ಕ್ರಾಂತಿ, ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದ ಮಹಾತ್ಮಗಾಂಧಿ
ಎಂದು ಗ್ರಾಮೀಣರಿಗೆ ತಿಳಿಸಿಕೊಟ್ಟ ಒಡಪು ಇದಾಗಿದೆ.

ಜಾತ್ರೆ ಸಾಹಿತ್ಯ ಕುರಿತು ರಚಿತವಾದ ಸಾಹಿತ್ಯಯ ಕೃತಿಗಳು ಬಹಳ ವಿರಳವಾಗಿದೆ ಎನ್ನಬಹುದು. ಈ ಕಾರಣಕ್ಕಾಗಿ ನನ್ನ ಕ್ಷೇತ್ರಕಾರ್ಯ ಸಮಯದಲ್ಲಿ ಹೆಚ್ಚಿನ ಸಮಯವನ್ನು ಜಾತ್ರಾ ಸಾಹಿತ್ಯದ ಹುಡುಕಾಟದಲ್ಲಿ ತೊಡಗಿದ್ದರು ನಿರೀಕ್ಷೀಸಿದ್ದಷ್ಟು ಸಾಹಿತ್ಯಗಳು ಲಭ್ಯವಾಗಲಿಲ್ಲ. ಕಾರಣ ಹಳೆಯ ತಲೆಮಾರಿನ ಜನರಾಗಲಿ, ಪೂಜಾರಿಗಳಾಗಲಿ ಗುನಗರಾಗಲ್ಲಿ ಈಗ ಬದುಕಿ ಉಳಿದವರು ಕಡಿಮೆ. ಇವರಲ್ಲಿಯ ಮೌಖಿಕ ಜಾತ್ರಾ ಸಾಹಿತ್ಯ ಬರವಣಿಗೆಯ ರೂಪದಲ್ಲಿ ಕರೂಪದಲ್ಲಿ ಪ್ರಕಟವಾಗಿರುವದ್ದು ಕಡಿಮೆ. ಅಪರೂಪಕ್ಕೆ ಒಂದಿಬ್ಬರು ಹಳೆಯ ಜನಾಂಗದವರು ಹಾಡಲು ಒಪ್ಪಿದ್ದರೂ ಅವರು ಮಕ್ಕಳು ಹಾಡಲು ಅಡ್ಡಿಪಡ್ಡಿಸುತ್ತಿದ್ದರು. ಈ ಎಲ್ಲಾ ಕಾರಣದಿಂದ

ಜಾತ್ರಾ ಸಾಹಿತ್ಯ ರಚನೆ ಸಂಗ್ರಹ ನನಗೆ ಕಠಿಣ ಸವಾಲಾಗಿ ಕಂಡುಬಂತು. ಇತ್ತಿಚೆಗಂತೂ ದೇವಾಲಯಗಳಲ್ಲಿ ವಿಡಿಯೋ ಆಡಿಯೋಗಳ ಮೂಲಕ ಹೊಸ ತಲೆಮಾರಿನ ಬರಗಾರರ ಮೂಲಕ ಹಾಡುಗಳು ಆಧುನಿಕ ರೀತಿಯಲ್ಲಿ ಸಂಸ್ಕೃತ, ಕನ್ನಡ, ಹಿಂದಿ, ಮರಾಠಿ, ಕೊಂಕಣಿಯಲ್ಲಿ ರಚಿತವಾಗಿ ಈ ಜಿಲ್ಲೆಯ ಪ್ರಾದೇಶಿಕತೆ ಮತ್ತು ಸ್ಥಳಿಯ ದೇವಾಲಯಗಳ ಐತಿಹ್ಯ ಇತಿಹಾಸಕ್ಕೆ ಅನುಗುಣವಾಗಿ ಹಾಡುಗಾರಿಂದ ಕಲಬೇರಿಕೆಯ ವಿಷಯ ವಸ್ತುಗಳಿಂದ ರಚಿಸಲ್ಪಟು ಹಾಡಲ್ಪಟ್ಟಿವೆ. ಆದರೂ ಸಹ ಕ್ಷೇತ್ರ ಕಾರ್ಯದಲ್ಲಿ ದೊರೆತ ಅಲ್ಪ ಮಾಹಿತಿ ಮತ್ತು ಈ ಜಿಲ್ಲೆಯ ಜಾನಪದ ವಿದ್ವಾಂಸರು ಸಂಗ್ರಹಿಸಿರುವ ಉಲ್ಲೇಖಗಳನ್ನು ಬಳಸಿಕೊಂಡು ಕರ್ನಾಟಕದ ಜಾನಪದ ವಿದ್ವಾಂಸರು ಜಾತ್ರಾ ಸಾಹಿತ್ಯದ ರಚಿಸಿರುವ ಕೆಲವಷ್ಟೇ ಹಾಡುಗಳನ್ನು ಸಂಗ್ರಹ ಮಾಡಿದ್ದನೆ.

ಅಡಿ ಟಪ್ಪಣಿ

1. **ಸಿ.ಎಸ್.ಶಿವಕುಮಾರ ಸ್ವಾಮಿ, (ಸಂ) ಡಾ. ಬಸವರಾಜ ಮಲಶೆಟ್ಟಿ (ಲೇ) ಕರ್ನಾಟಕ ಜಾತ್ರೆಗಳು,**ಪುಟ–88
2. ಜಗನ್ನಾಥ ಹೆಬ್ಬಾಳೆ(ಸಂ)ಹೈದರಾಬಾದ ಕರ್ನಾಟಕ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ,ಪುಟ–116
3. ಅದೇ,ಪುಟ–130
4. ಅದೇ,ಪುಟ–137
5. ಸಿ.ಎಸ್.ಶಿವಕುಮಾರಸ್ವಾಮಿ;(ಸಂ) ಕರ್ನಾಟಕ ಜಾತ್ರೆಗಳು: ಪುಟ– 238,
6. ಉಲ್ಲೇಖ,ಬ್ರಹ್ಮ ಶಿವ : ಸಮಯಪರೀಕ್ಷೆ:ಪುಟ– 4–123
7. ಜನ್ನ ;ಯಶೋಧರ ಚರಿತ್ರೆ–ಪುಟ–1–22
8. ಜನ್ನ: ಯಶೋಧರ ಚರಿತೆ ಪುಟ–1–22
9. ಪುಣ್ಯಸ್ರವ ನಾಗರಾಜ (4–11)
10. ಭೀಮಕವಿ; ಬಸವಪುರಾಣ (42–10)
11. **ಸಿ.ಎಸ್.**ಶಿವಕುಮಾರ ಸ್ವಾಮಿ, (ಸಂ) ಡಾ. ಬಸವರಾಜ ಮಲಶೆಟ್ಟಿ (ಲೇ) ಕರ್ನಾಟಕ ಜಾತ್ರೆಗಳು,ಪುಟ–882.
12. ಜಗನ್ನಾಥ ಹೆಬ್ಬಾಳೆ(ಸಂ)ಹೈದರಾಬಾದ ಕರ್ನಾಟಕ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ,ಪುಟ–116
13. ಅದೇ,ಪುಟ–130
14. ಅದೇ,ಪುಟ–137
15. ಎಮ್.ಎಸ್.ಲಠೆ (ಸಂ)ಉತ್ತರ ಕರ್ನಾಟಕದ ಹಂತೀ ಹಾಡುಗಳು . ಪುಟ–188
16. ಅದೇ. ಪುಟ – 102
17. ಹಲಸಂಗಿ ಗೆಳೆಯರು. (ಸಂ) ಗರತಿಯ ಹಾಡು,ಪುಟ – 105
18. ಎಮ್.ಎಸ್.ಲಠೆ.(ಸಂ) ಉತ್ತರ ಕರ್ನಾಟಕದ ಹಂತೀ ಹಾಡುಗಳು ಪುಟ–112
19. ಡಾ.ಬಸವರಾಜ ಮಲಶೇಟ್ಟಿ ಕರ್ನಾಟಕಜಾತ್ರೆಗಳು,ವಿಚಾರ ಸಂಕಿರಣ.ಡಾ.ಬಸವರಾಜ ಮಲಶೇಟ್ಟಿ ಪುಟ–88
20. ಬೆರೆಸಿ ಇಟ್ಟಿನ ಬೆಲ್ಲ ನೆನಗಡಲಿ. ಲೇ.ಜ್ಯೋತಿ ಹೊಸೂರ. ಪುಟ–29
21. ಉತ್ತರ ಕರ್ನಾಟಕದ ಹಂತೀ ಹಾಡುಗಳು.ಸಂ.ಎಮ್.ಎಸ್.ಲಠೆ. ಪುಟ–100.
22. ಮತಿಘಟ್ಟ ಕೃಷ್ಣಮೂರ್ತಿ(ಲೇ) ಗೀತೆಗಳು.. ಪುಟ – 183.
23. ಅದೇ ಪುಟ – 189.
24. ಗರತಿಯ ಹಾಡುಗಳು.(ಸಂ) ಹಲಸಂಗಿ ಗೆಳೆಯರು. ಪುಟ–78.
25. ಎಮ್.ಎಸ್.ಲಠೆ.(ಸಂ) ಉತ್ತರ ಕರ್ನಾಟಕದ ಹಂತೀ ಹಾಡುಗಳುಪುಟ–118
26. ಬಾಲಕೃಷ್ಣ ಜಂಬಗಿ. (ಸಂ) ಗೆಜ್ಜ ನುಡಿದಾವ ಪುಟ – 118
27. ಡಾ. ಬಿ.ಎಸ್.ಗದ್ದಗಿಮಠ (ಸಂ)ಕನ್ನಡ ಜಾನಪದ ಗಿತೆಗಳು.. ಪುಟ – 25.
28. ಉತ್ತರ ಕರ್ನಾಟಕದ ಹಮತಿಯ ಹಾಡುಗಳು ಸಂ.ಡಾ.ಎಮ್.ಎಸ್.ಲಠೆ, ಪುಟ–13.
29. ವೀರಭದ್ರ, ಲೇ. ಜಗನ್ನಾಥ ಹೆಬ್ಬಾಳೆ. ಪುಟ –39.
30. ಉತ್ತರ ಕರ್ನಾಟಕದ ಹಂತಿಯ ಹಾಡುಗಳು ಸಂ.ಡಾ.ಎಮ್.ಎಸ್.ಲಠೆ, ಪುಟ–14.
31. ಜಗನ್ನಾಥ ಹೆಬ್ಬಾಳೆ. (ಲೇ)ವೀರಭದ್ರ, ಪುಟ –43.
32. ಕಾಳೇಗೌಡ ನಾಗವಾರ (ಲೇ)ಬೇಕಾದ ಸಂಗಾತಿ, ಪುಟ –85.
33. ಜಗನ್ನಾಥ ಹೆಬ್ಬಾಳೆ(ಸಂ)ಹೈದರಾಬಾದ ಕರ್ನಾಟಕ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ,ಪುಟ–